ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಉನ್ನತ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಕೋರ್ಸುಗಳು, ಸಂಯೋಜನೆ ಶುಲ್ಕ, ಮುಂದುವರಿಕೆ ಶುಲ್ಕ, ಅರ್ಹತಾ ಶುಲ್ಕಗಳು ಏಕ ರೂಪದಲ್ಲಿರುವುದಿಲ್ಲ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 2000ದ ಪ್ರಕಾರ ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳು ಸಿಂಡಿಕೇಟ್‌ನ ಅನುಮೋದನೆ ಪಡೆದು, ಶುಲ್ಕ ನಿರ್ಧರಣೆಯನ್ನು ಕಾಲಕಾಲಕ್ಕೆ ನಿಗದಿಪಡಿಸುತ್ತವೆ.

ಆ) ಪ್ರತಿಯೊಂದು ವಿಶ್ವವಿದ್ಯಾನಿಲಯಗಳಲ್ಲೂ ಬೇರೆ-ಬೇರೆ ಕೋರ್ಸುಗಳು ಇದ್ದು, ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸಂಯೋಜನಾ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ.

101 ಶ್ರೀ ಬಸವರಾಜನ್ ಎಸ್.ಕೆ. : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಅನುದಾನಿತ ಖಾಸಗಿ ಕಾಲೇಜು ಹಾಗೂ ಅನುದಾನರಹಿತ, ಖಾಸಗಿ ಬಿ.ಎಡ್., ಕಾಲೇಜುಗಳ ಸಂಖ್ಯೆ ಎಷ್ಟು; ಸರ್ಕಾರಿ, ಅನುದಾನಿತ, ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಆ) ಈ ಕಾಲೇಜುಗಳಿಗೆಂದು ಸರ್ಕಾರದಿಂದ ನಿಗದಿಪಡಿಸಿರುವ ಸೀಟುಗಳ ಸಂಖ್ಯೆ ಎಷ್ಟು; ಸರ್ಕಾರಿ ಅನುದಾನಿತ, ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಇ) ಈ ಕಾಲೇಜುಗಳಿಗೆ ಸರ್ಕಾರ ನಿಗದಿಪಡಿಸಿರುವ ಶುಲ್ಕ ಎಷ್ಟು; ಸರ್ಕಾರಿ ಅನುದಾನಿತ ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಈ) ಒಂದು ವರ್ಷದಲ್ಲಿ ಬಿ.ಎಡ್., ಉತ್ತೀರ್ಣರಾದ ಶೇಕಡವಾರು ಅಭ್ಯರ್ಥಿಗಳ ಸಂಖ್ಯೆ ಎಷ್ಟು; ಸರ್ಕಾರಿ ಅನುದಾನಿತ ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಉ) ಹೀಗೆ ಉತ್ತೀರ್ಣರಾದ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವ ಕಾಶವನ್ನು ಕಲ್ಪಿಸಿ ಕೊಡಲಾಗಿದೆ (ಕಳೆದ ಮೂರು ವರ್ಷಗಳ ವರ್ಷಾವಾರು ವಿವರ ನೀಡುವುದು)?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಸರ್ಕಾರಿ ಬಿ.ಇಡಿ ಕಾಲೇಜುಗಳು : 009

ಅನುದಾನಿತ ಬಿ.ಇಡಿ.ಕಾಲೇಜುಗಳು : 021

ಖಾಸಗಿ ಬಿ.ಇಡಿ. ಕಾಲೇಜುಗಳು : 380

ಒಟ್ಟು : 410

ಆ) ಪ್ರತಿ ಕಾಲೇಜಿಗೆ 100 ವಿದ್ಯಾರ್ಥಿಗಳ ದಾಖಲಾತಿ ಮಿತಿ ಇರುತ್ತದೆ. ಅದನ್ನು ಕೆಳಕಂಡಂತೆ ಹಂಚಿಕೆ ಮಾಡಲಾಗುವುದು:

1. ಸರ್ಕಾರಿ 100 (ಸರ್ಕಾರಿ ಸೀಟುಗಳು)
2. ಅನುದಾನಿತ 100 (ಸರ್ಕಾರಿ 75, ಆಡಳಿತ ಮಂಡಳಿ 25)
3. ಅನುದಾನರಹಿತ 100 (ಸರ್ಕಾರಿ 50,ಆಡಳಿತ ಮಂಡಳಿ 50)

ಇ) ಸರ್ಕಾರಿ ಸೀಟುಗಳು : ರೂ.05125.00

ಅನುದಾನಿತ ಕಾಲೇಜುಗಳಲ್ಲಿ ಸರ್ಕಾರಿ ಸೀಟು : ರೂ.06125.00

ಅನುದಾನರಹಿತ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳು: ರೂ.10,125.00

ಅನುದಾನರಹಿತ ಕಾಲೇಜುಗಳಲ್ಲಿ ಖಾಸಗಿ ಸೀಟುಗಳು: ರೂ.35.000.00

ಈ)

ಕ್ರ ಸಂ.	ವಿಶ್ವವಿದ್ಯಾಲಯದ ಹೆಸರು	ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ
1	ಮೈಸೂರು ವಿಶ್ವವಿದ್ಯಾನಿಲಯ	97.37%
2	ಬೆಂಗಳೂರು ವಿಶ್ವವಿದ್ಯಾನಿಲಯ	4401
3	ಕರ್ನಾಟಕ ವಿಶ್ವವಿದ್ಯಾನಿಲಯ	91.75%
4	ಕುವೆಂಪು ವಿಶ್ವವಿದ್ಯಾನಿಲಯ	91.75%
5	ಮಂಗಳೂರು ವಿಶ್ವವಿದ್ಯಾನಿಲಯ	96.65%
6	ಗುಲ್ಬರ್ಗ ವಿಶ್ವವಿದ್ಯಾನಿಲಯ	94.58%
7	ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ	98.27%
8	ತುಮಕೂರು ವಿಶ್ವವಿದ್ಯಾನಿಲಯ	85.47%

ಉ) ಕಳೆದ ಮೂರು ವರ್ಷಗಳಲ್ಲಿ ಉದ್ಯೋಗಾವಕಾಶವನ್ನು ಪಡೆದಿರುವ ಅಭ್ಯರ್ಥಿಗಳ ಸಂಖ್ಯೆ :

2006–07	–	5984
2007–08	–	5282
2008–09	–	0099*

*ಅಂಗವಿಕಲರಿಗೆ ವಿಶೇಷ ನೇಮಕಾತಿ

789 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪೂರ ಜಿಲ್ಲೆ, ಬಸವನಬಾಗೇವಾಡಿ ಮತಕ್ಷೇತ್ರದಲ್ಲಿ ಪಶು ಆಸ್ಪತ್ರೆಗಳನ್ನು ಸ್ಥಾಪಿಸುವುದು ಅತ್ಯವಶ್ಯಕತೆ ಬಗ್ಗೆ ಹಾಗೂ ಈಗಿರುವ ತಾಲ್ಲೂಕು ಪಶು ಚಿಕಿತ್ಸಾ ಸಂಚಾರ ವಾಹನದಲ್ಲಿನ ಸಿಬ್ಬಂದಿ ಕೊರತೆ ಹಾಗೂ ಅತ್ಯವಶ್ಯಕವಾಗಿರುವ ಸಿಬ್ಬಂದಿಗಳ ಕೊರತೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಂದ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗುತ್ತದೆ. ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕಿನಲ್ಲಿ 2003ರ ಜಾನುವಾರು ಗಣತಿಯಂತೆ 75150 ಜಾನುವಾರು ಘಟಕಗಳಿದ್ದು, ಅದರಂತೆ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ 15 ಪಶುವೈದ್ಯಕೀಯ ಸಂಸ್ಥೆಗಳ ಅಗತ್ಯವಿರುತ್ತದೆ. ಆದರೆ ಹಾಲಿ 22 ಪಶುವೈದ್ಯಕೀಯ ಸಂಸ್ಥೆಗಳಿದ್ದು, 7 ಸಂಸ್ಥೆಗಳು ಹೆಚ್ಚುವರಿಯಾಗಿರುತ್ತದೆ. ಆದುದರಿಂದ ಸದರಿ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ನೂತನವಾಗಿ ಪಶುವೈದ್ಯಕೀಯ ಆಸ್ಪತ್ರೆ ತೆರೆಯುವ ಅವಶ್ಯಕತೆವಿರುವುದಿಲ್ಲ. ಬಸವನ ಬಾಗೇವಾಡಿ ಸಂಚಾರಿ ಪಶುಚಿಕಿತ್ಸಾಲಯಕ್ಕೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.